

ನೀ. ಶ್ರೀಶೈಲ ಹುಲ್ಲೂರು
ಕಲೆ: ಸಂತೋಷ್ ಸಸಿಹಿತ್ಲು

# ಕತೆಯ ಹಂಬಲ

ಅಮ್ಮ ಬಾರೆ ಕತೆಯ ಹೇಳೆ
ಕೇಳುತಿರುವೆ ನಾನು
ಕೆಲಸವಿದೆ ಎಂದು ಕೈಯ
ಕೊಸರದಿರು ನೀನು

ಮನೆಯಲಿದ್ದು ಬೇಸರೆನಗೆ
ಖುಷಿಯೆ ಇಲ್ಲ ದಿನವಿಡಿ
ಕತೆಯ ಜೊತೆಗೆ ನಗೆಯ ಹರಿಸು
ಕೇಳುತಿರುವೆ ಸವಿನುಡಿ

ಶಾಲೆಯಿಲ್ಲ ಗೆಳೆಯರಿಲ್ಲ
ಕೂಡಿ ನಲಿವ ಸೊಗಸು ಇಲ್ಲ
ಆಟವಿಲ್ಲ ಪಾಠವಿಲ್ಲ
ನೀನೆ ನನಗೆ ಸಕಲವೆಲ್ಲ

ತಿಂಡಿ ತಿನಿಸು ಕೊಡುವೆ ನೀನು
ಬಿಡದೆ ತಿನುವೆ ಎಲ್ಲ ನಾನು
ಸಾಕು ನನಗೆ ಬೇಡವೇನು
ನಿನ್ನ ಪ್ರೀತಿ ಹಾಲು ಜೇನು

ನಿನ್ನ ಮೇಲು ಸೆರಗು ಹೊಚ್ಚಿ
ಲಾಲಿ ಹಾಡುವಾಸೆ ನಿನಗೆ
ನಿನ್ನ ತೊಡೆಯ ಮೇಲೆ ಕುಳಿತು
ಕತೆಯ ಕೇಳುವಾಸೆ ನನಗೆ

